# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.776/ 2021

ಸಿಡಬ್ಲ್ಯೂ ಃ **2**
ಪಿಡಬ್ಲ್ಯೂ ಃ **2**

<u>ದಿನಾಂಕಃ **07-11-2024**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರು - ರಾಜು

ತಂದೆಯ/ಗಂಡನ ಹೆಸರು - ಈರ್ಯಾ

ವಯಸ್ಸು -? **36** ವರ್ಷ

ಉದ್ಯೋಗ - ಖಾಸಗಿ ಕೆಲಸ

ವಾಸಸ್ಥಳಃ - ಅಲ್ಲಿಪೂರ ವಾರಿ ತಾಂಡಾ.

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ</u>

ಸಾಕ್ಷಿಯು ಅಪಘಾತ ಸ್ಥಳದ ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಅಪಘಾತ ಸ್ಥಳದ ಪಂಚನಾಮೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಕಳೆದ **3** ವರ್ಷಗಳ ಹಿಂದೆ ದಿನಾಂಕಃ 23.02.2021 ರಂದು ಕಂಚಗರ ಗೇಟ್ ಹತ್ತಿರ ಸಹಿ ಮಾಡಿರುತ್ತೇನೆ. ಅಪಘಾತ ಆದ ಕುರಿತು ನಾನು ಸಹಿ ಮಾಡಿರುತ್ತೇನೆ. ಬೆಳಗ್ಗೆ 9 ರಿಂದ 10 ಗಂಟೆಯ ಒಳಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿಗೆ ಒಂದು ಛಯಾಚಿತ್ರವನ್ನು ತೋರಿಸಲಾಯಿತು ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ **3** ಎಂದು ಗುರುತಿಸಲಾಯಿತು. ನನ್ನ ಜೊತೆಗೆ ಕಂಚಗರ ತಾಂಡಾದವನ್ನಾದ ಚಾಸಾ-**3** ರವರು ಇದ್ದರು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ. ರವರು ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅವರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಹಿರಿಯ.ಸ.ಸ ರವರಿಂದಃ

ದಿನಾಂಕಃ 23.02.2021 ರಂದು ಬೆಳಗ್ಗೆ 8 ರಿಂದ 9 ಗಂಟೆಯ ಅವದಿಯಲ್ಲಿ ಪಂಚನಾಮೆಯನು ಬರೆದರು ಅದನ್ನು ನಮ್ಮಗೆ ಓದಿ ಹೇಳಿದ್ದರು ನಾವು ತಿಳಿದುಕೊಂಡು ಸಹಿ ಮಾಡಿರುತ್ತೇವೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಎಸ್.ಪಿ. ರವರಿಂದಃ

ಚಾಸಾ-1 ರವರು ನಮ್ಮ ಊರಿನವರು ಇರುತ್ತಾರೆ. ಚಾಸಾ-1 ರವರ ವೈಕ್ತಿಕವಾಗಿ ನನಗೆ ಪರಿಚಯ ಇರುವುದಿಲ್ಲ. ನಾನು ಶಾಲೆಯನ್ನುಕಲಿತ್ತಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಅಪಘಾತವು ಯಾದಗಿರಿ ನಗರದ ಯಾದಗಿರಿ -ಹೈದ್ರಬಾದ್ ಮುಖ್ಯ ರಸ್ತೆಯ ಮೇಲೆ ಬರುವ ಶುಭಂ ಪೆಟ್ರೋಲ್ ಬಂಕ್ ಹತ್ತಿರ ಅಪಘಾತ ಆಗಿರುತ್ತದೆ ಎಂದು ಪೊಲೀಸರು ನನಗೆ ಓದಿ ಹೇಳಿರುತ್ತಾರೆ ಎಂದರೆ ಸರಿ. ಅಪಘಾತ ಆದ ದಿನದಂದು ಪೊಲೀಸರು ಪಂಚನಾಮೆ ಪಂಚನಾಮೆಯನ್ನು ಮಾಡಿರುತ್ತಾರೆ. ಅಪಘಾತ ಆದದಿನದಂದು ಪೊಲೀಸರು ನನ್ನ ಸಹಿಯನ್ನು ಅಪಘಾತ ಸ್ಥಳದಲ್ಲಿ ಪಡೆದುಕೊಂಡಿರುತ್ತಾರೆ. ಅಪಘಾತ ಸ್ಥಳದ ಉತ್ತರ ದಿಕ್ಕಿಗೆ ನಾರಾಯಾಣ ರವರ ಮನೆ ಇರುತ್ತದೆ. ಸಾಕ್ಷಿಯು ಮುಂದುವರೆದು ನನಗೆ ದಿಕ್ಕುಗಳ ಬಗ್ಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಕಳೆದಮೂರು ವರ್ಷಗಳ ಹಿಂದೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಪೊಲೀಸರು ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿ ನಮ್ಮ ಛಯಾಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ನಕ್ಷೆ ತೋರಿಸಿರುವುದನ್ನು ನಾನು ನೋಡಿರುತ್ತೇನೆ. ಪಂಚನಾಮೆಯಲ್ಲಿ ತೋರಿಸಿದ ಅಪಘಾತ ಸ್ಥಳದ ಕಚ್ಚ ನಕಾಶೆಯಲ್ಲಿ ನಾರಾಯಾಣರವರ ಮನೆಯನ್ನು ತೋರಿಸಿರುವುದಿಲ್ಲ. ನನ್ನ ಸಮಕ್ಷಮ ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡದೇ ಇದ್ದರು ಸಹ ಚಾಸಾ-1 ರವರ ಮಾತನ್ನುಕೇಳಿ ನಾನು ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನಾನು ಸುಳ್ಳ ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ನಾನೇ ನೋಡಿರುತ್ತೇನೆ ಎಂದು ಹೇಳುತ್ತಾರೆ.

**ಮರುವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.